ಒಂದಲ್ಲ ಸಮಾಧಾನ. ಕದ ತೆರೆದಿದ್ದು ಸ್ವತಾ ಅಣ್ಣ. "ಬಂದ್ರಾ?" ಅನ್ನುವ ದನಿಯಲ್ಲಿ 'ಬಂದುಬಿಟ್ರಾ?' ಎನ್ನುವ ಅರ್ಥ ಗೋಚರಿಸಿದ್ದು ಹೊರಹೊರಗೆ ಕಳೆದು ಬಂದ ದಿನಗಳ ಕಹಿಯಿಂದಿರಬಹುದು. ಮೊದಲಾಗಿದ್ದರೆ ಅಣ್ಣ ಅವನು ತಂದ ಕೈಚೀಲಗಳನ್ನು ಕೈಯಿಂದ ಕಸಿದುಕೊಂಡು ಒಳಗೆತ್ತಿಕೊಂಡು ಹೋಗುತ್ತಿದ್ದ. ಈಗೇಕೋ ಎಲ್ಲಾ ಒಣ ಒಣ. ರಾಜೀವ ತಾನು ತಂದ ಹೊರೆಯನ್ನು ತಾನೇ ಒಳಗೆ ಹೊತ್ತು ಮುಂಜಗುಲಿಯ ಮೂಲೆಯಲ್ಲಿ ಜೋಡಿಸಿಟ್ಟ.

"ಇನ್ನೂ ಎರಡು ಸಲ ಹೋಗಿ ಬರ್ಬೇಕಾಗುತ್ತೆ. ಒಂದಷ್ಟು ಸಾಮಾನು ಅಲ್ಲೇ ಉಂಟು..." ಅಂದ. ಅಣ್ಣ 'ನಡಿ, ನಾನೂ ಬರ್ತೀನಿ' ಅನ್ನಬಹುದೆನ್ನುವ ನಿರೀಕ್ಷೆ ಹುಸಿಯಾಯ್ತು. ಕಾಯಿಲೆ ತಾಂಡವನರ್ತನಗೈಯುತ್ತಿರುವಲ್ಲಿಂದ ಬಂದವನ ಸಾಮಾನು ಸರಂಜಾಮುಗಳನ್ನು ಮುಟ್ಟಲು ಅಳುಕೋ ಅಥವಾ ಕಾಯಂ ಆಗಿ ನೆಲೆಯೂರಲು ಬಂದಿದ್ದಾರೆನ್ನುವ ಎದೆಗುದಿಯೋ? ಎರಡುವಾರಗಳ ಪ್ರತ್ಯೇಕ ವಾಸ ಪೂರೈಸಿ ಬಂದವರ ಒಡನಾಟಕ್ಕೆ ಹಿಂಜರಿಯಬೇಕಾದ ಯಾವ ಕಾರಣವೂ ಇಲ್ಲ. ಅಂದಮೇಲೆ ಎರಡನೆಯ ಅನುಮಾನವೇ ನಿಜವೇ? 'ಹಂಚಿ ಉಣ್ಣುವುದು' ಬಾಯ್ಮಾತಿನಲ್ಲಿ ಹೇಳುವಷ್ಟು ಸಲೀಸಲ್ಲ. ಆಸ್ತಿ ಅನ್ನುವುದು ಸಣ್ಣಮಟ್ಟದ್ದೇ ಇರಲಿ, ಇಲ್ಲಿಯವರೆಗೆ ಅನುಭವಿಸಿಕೊಂಡು ಬಂದವನಿಗೆ ಅದರಲ್ಲಿ ಪಾಲುದಾರರು ಬರುವುದು ಹಿತವಾಗುವುದಿಲ್ಲ ಅನ್ನುವುದು ಅರ್ಥ ಮಾಡಿಕೊಳ್ಳಬಹುದಾದ ಸಂಗತಿ. ತಪ್ಪೆಣಿಸಬಾರದು ಒಡಹುಟ್ಟಿದವನಲ್ಲಿ. ಕೊನೆಗಾಲದವರೆಗೆ ಅಪ್ಪನನ್ನು ನೋಡಿಕೊಂಡಿದ್ದಾನೆ. ಅಮ್ಮನನ್ನು ನೋಡಿಕೊಳ್ಳುತ್ತಿದ್ದಾನೆ. ತಂಗಿಯ ಮದುವೆ, ಬಾಣಂತನ ಎಂದು ಕರ್ತವ್ಯ ಪೂರೈಸಿದ್ದಾನೆ. ಪ್ರತಿಫಲವಾಗಿ ಇಲ್ಲಿನ ಭೂಮಿಯ ಹಕ್ಕು ತನಗೆ ಸಲ್ಲಬೇಕಾದ್ದು ನ್ಯಾಯ ಎನ್ನುವ ಯೋಚನೆ ಅವನ ತಲೆಯೊಳಗಿದ್ದರೆ ಆಶ್ಚರ್ಯವಿಲ್ಲ. 'ತಾನು ವಿಪರೀತವಾಗಿ ಯೋಚಿಸುತ್ತಿದ್ದೇನೆ' ಎಂದು ರಾಜೀವನಿಗೇ ಅನಿಸಿತು. ಸುಳಿವೇ ಕೊಡದೆ ಅತಂತ್ರಸ್ಥಿತಿಗೆ ದೂಡಿದ ಪರಿಸ್ಥಿತಿ ಇದಕ್ಕೆ ಕಾರಣವಿರಬಹುದು. ಆದರೂ... ಹೊರಟುಬರುವಾಗಿನ ನಿರೀಕ್ಷೆಗಳೆಲ್ಲಾ ತಲೆಕೆಳಗಾಗುತ್ತಿವೆ. ಯಾರದೋ ಮನೆಗೆ ಒಲ್ಲದ ಅತಿಥಿಯಾಗಿ ಬಂದು ಸೇರಿಕೊಂಡ ಅನುಭವ. 'ಎಲ್ಲಿ ಅಮ್ಮ?' ಎಂದು ಕೇಳಬೇಕೆನ್ನುವಷ್ಟರಲ್ಲಿ ಪ್ರತ್ಯಕ್ಷಳಾದಳು ಅಮ್ಮ.



"ಹೇಗಿದೀರಿ?" ಪ್ರಶ್ನೆ.

"ನೋಡ್ತಿದೀಯಲ್ಲ..." ಉತ್ತರ.

ವಾರಗಳ ನಂತರ ಜನರ ಮುಖ ನೋಡಿದ ಸಮೀರ ಮನೆಯ ತಣ್ಣೆಳಲಿನಲ್ಲಿ ರೆಕ್ಕೆ ಬಂದ ಹಕ್ಕಿಯಂತೆ ಹಾರಾಡುತ್ತಿದ್ದ. ಕೆಳಗಿನ ಜಗುಲಿಯಿಂದ ಮೇಲ್ ಜಗುಲಿಗೆ ಹತ್ತಿ ಮತ್ತೆ ಕೆಳಗೆ ಹಾರುವ ಆಟವಾಡುತ್ತಾ ನಲಿಯುತ್ತಿದ್ದ. ಮೊಮ್ಮಗನನ್ನು ಕಂಡ ಅಮ್ಮ ಬಾಚಿ, ತಬ್ಬಿ, ಮುತ್ತಿಟ್ಟು ಸುಖಿಸುವಳೆಂದು ರಾಜೀವ ಅಂದುಕೊಂಡಿದ್ದರೆ ಅಮ್ಮನ ಬಾಯಿಂದ ಉದುರಿ ಬಿದ್ದ ಮಾತುಗಳೇ ಬೇರೆ.

"ಮೊದಲು ಬಚ್ಚಲಿಗೆ ಹೋಗಿ ಕೈಕಾಲು ತೊಳ್ಕಂಬನ್ನಿ. ಆಮೇಲೆ ಆಡ್ಕೊಳ್ಳಿ ಅವನು..."

ಅಣ್ಣನ ಮಕ್ಕಳು ಒಳಬಾಗಿಲಲ್ಲಿ ಹಣಿಕಿ ಓಡಿ ಹೋದರು. ಕಿವಿ ಕಚ್ಚಿದ್ದಾಳೆಯೇ ಅತ್ತಿಗೆ? ಉಗುಳು ನುಂಗಿಕೊಂಡ ರಾಜೀವ. 'ಎರಡು ವಾರ ಅಂತಲ್ಲಿ ಹೇಗೆ ಕಾಲ ಹಾಕಿದ್ರಿ? ಕಷ್ಟವಾಯ್ತಾ? ಊಟಕ್ಕೆ ತೊಂದರೆಯಾಯ್ತಾ?' ಒಂದೂ ಪ್ರಶ್ನೆಯಿಲ್ಲ, ಲೋಕಾಭಿರಾಮಕ್ಕಾದರೂ. ಮನುಷ್ಯಸಂಬಂಧಗಳೆಲ್ಲಾ ತಮ್ಮ